**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 570/2023**

**ಪಿ.ಡಬ್ಲ್ಯೂ-3**
**ಸಿ.ಡಬ್ಲ್ಯೂ-6**

**ಸಾಕ್ಷಿಗೆ ದಿನಾಂಕ 27-03-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿಯ ಹೆಸರು : ದೇವರಾಜ್

ತಂದೆಯ ಹೆಸರು : ರಂಗಪ್ಪ

ವಯಸ್ಸು : 24 ವರ್ಷ

ಉದ್ಯೋಗ : ಖಾಸಗಿ ಉದ್ಯೋಗ

ವಾಸಸ್ಥಳ : ಎನ್.ಜಿ.ಹಳ್ಳಿ

**ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ**

ನನಗೆ ಚಾಸಾ-7 ರವರ ಪರಿಚಯ ಇರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

**ಸಾಕ್ಷಿಗೆ ಒಂದು ದಾಖಲೆ ತೋರಿಸಿದ್ದು, ಸದರಿ ದಾಖಲೆ ವಾಹನ ಬಿಡುಗಡೆ ಪಂಚನಾಮೆ ಆಗಿದ್ದು, ಅದನ್ನು ನಿ.ಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-4(ಎ) ಎಂದು ಗುರುತಿಸಲಾಯಿತು. 3 ಫೋಟೋಗಳನ್ನು ನಿ.ಪಿ-5 ರಿಂದ 7 ಎಂದು ಗುರುತಿಸಲಾಯಿತು.** ನಿ.ಪಿ-4 ಕ್ಕೆ ಸುಮಾರು ಒಂದೂವರೆ ವರ್ಷಗಳ ಹಿಂದೆ ಹೊಸದುರ್ಗ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿ.ಪಿ-4 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನಿ.ಪಿ-5 ರಿಂದ 7 ರ ಫೋಟೋಗಳನ್ನು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಮಹಜರ್ ಮಾಡಿ ಯಾವುದೇ ವಾಹನವನ್ನು ಬಿಡುಗಡೆ ಮಾಡಿರುವುದಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಸಕಾರಣಗಳನ್ನು ಮನಗಂಡು ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ</u>**

ದಿನಾಂಕ 10-02-2023 ರಂದು ಚಾ.ಸಾ-1 ರವರು ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಮೋಟಾರ್ ಸೈಕಲ್ ಕೆಎ-16-ಇಎ-6749 ರ ವಾಹನವನ್ನು ನನ್ನ ಮತ್ತು ಚಾ.ಸಾ-10 ರವರ ಸಮಕ್ಷಮ ನಿ.ಪಿ-4 ರಂತೆ ಸಂಜೆ 6 ರಿಂದ 6-30 ರವರೆಗೆ ಮಹಜರ್ ಮಾಡಿ ಸದರಿ ವಾಹನವನ್ನು ಅದರ ಮಾಲೀಕರಾದ ಆರೋಪಿಗೆ ಬಿಡುಗಡೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಸ್ಥಳದಲ್ಲಿ ಹಾಜರಿದ್ದು ನಿ.ಪಿ-4 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ನಿ.ಪಿ-4 ರ ಮಹಜರ್ ಕಾಲದಲ್ಲಿ ಹಾಜರಿದ್ದರೂ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಆರ್.ವೈ. ವಕೀಲರಿಂದಃ**

ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ಸಲ್ಲಿಸುತ್ತಾರೆ.

**ಮರು ವಿಚಾರಣೆ ಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನದಂತೆ ಬೆರಳಚ್ಚು ಮಾಡಲಾಯಿತು)**
**ಓ.ಹೇ.ಕೆ.ಸರಿ ಇದೆ.**

**(ಪ್ರಸನ್ನಕುಮಾರ್ ಸಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಹೊಸದುರ್ಗ.**